# ಶ್ರೇಷ್ಠರು ಯಾರು?



ನಮ್ಮೂರಿನ ಕಾಡಿನಲ್ಲಿ ಅನೇಕ ಪ್ರಾಣಿಗಳು ಹಾಯಾಗಿ ವಾಸವಾಗಿದ್ದವು. ಅಲ್ಲಿದ್ದ ಒಂದು ಸಿಂಹಕ್ಕೆ ತಾನು ಮಹಾ ಶಕ್ತಿಶಾಲಿ, ತಾನು ಈ ಕಾಡಿನ ರಾಜನಾಗಬೇಕು ಎಂಬ ಬಯಕೆಯಿತ್ತು. ಆದರೆ ಆ ಕಾಡಿನಲ್ಲಿದ್ದ ಒಂದು ಆನೆಯು ತಾನೇ ಹೆಚ್ಚು ಬಲಶಾಲಿ, ಕಾಡಿನ ರಾಜನಾಗಲು ತಾನೇ ಅರ್ಹನೆಂದು ಹೇಳುತಿತ್ತು. ಸಿಂಹ ಆನೆ ಇಬ್ಬರೂ ಪ್ರತಿದಿನ ತಮ್ಮ ತಮ್ಮ ಸಾಮರ್ಥ್ಯವನ್ನು ಹೇಳಿಕೊಳ್ಳಲಾರಂಭಿಸಿದವು.

ಸಿಂಹ 'ನಾನು ಮಾಂಸಾಹಾರಿಯಾಗಿದ್ದು ಬಲಿಷ್ಠನಾಗಿದ್ದೇನೆ. ನನಗೆ ಚೂಪಾದ ಹಲ್ಲುಗಳು, ಉಗುರುಗಳು ಇವೆ. ನನ್ನ ಗರ್ಜನೆಗೆ ಇಡೀ ಕಾಡೇ ನಡುಗುತ್ತದೆ. ಆದ್ದರಿಂದ ನಾನೇ ಹೆಚ್ಚು ಶಕ್ತಿವಂತ'ಎಂದು ಹೇಳುತ್ತಿತ್ತು. ಆನೆ 'ನಾನು ಸಸ್ಯಾಹಾರಿಯಾದರೂ ಬೃಹದಾಕಾರದ ದೇಹ ಹೊಂದಿದ್ದೇನೆ. ಕಾಡಿನ ಯಾವುದೇ ಮರವನ್ನಾದರೂ ಕೆಡವಬಲ್ಲಂತಹ ಶಕ್ತಿ ನನಗಿದೆ. ನನ್ನ ಒಂದು ಘೀಳಿಗೆ ಎಲ್ಲಾ ಜೀವಿಗಳೂ ಹೆದರಿ ನಡುಗುತ್ತವೆ. ನಾನೇ ಹೆಚ್ಚು ಬಲಶಾಲಿ' ಎಂದು ಹೇಳುತ್ತಿತ್ತು.

ಇವರಿಬ್ಬರ ಈ ವಾಗ್ವಾದ ಕೇಳಲು ಕಾಡಿನ ಇತರ ಪ್ರಾಣಿಗಳು ನೆರೆಯುತ್ತಿದ್ದವು. ದಿನದಿನವೂ ಇದೇ ವಾದಸರಣಿ ಮತ್ತು ಗರ್ಜನೆ, ಘೀಳಾಟ ಕೇಳಿ ಕೇಳಿ ಕಾಡಿನ ಇತರ ಎಲ್ಲಾ ಪ್ರಾಣಿಗಳಿಗೂ ಕಿರಿಕಿರಿಯಾಗತೊಡಗಿತು. ಕಾಡಿನ ಶಾಂತ ವಾತಾವರಣ ಹಾಳಾಯಿತು.

ಕಾಡಿನ ವಾತಾವರಣ ಮೊದಲಿನಂತೆ ಶಾಂತವಾಗಿರಬೇಕು, ಸಿಂಹ ಮತ್ತು ಆನೆಗೆ ತಕ್ಕ ಪಾಠ ಕಲಿಸಬೇಕು ಎಂದು ಒಂದು ಪುಟ್ಟ ಜೀರುಂಡೆ ಒಂದು ಉಪಾಯ ಮಾಡಿತು. ಸಿಂಹ ಮತ್ತು ಆನೆ ತಮ್ಮ ವಾಗ್ವಾದ ಪ್ರಾರಂಭಿಸಿದಾಗ ಜೀರುಂಡೆ ಸಿಂಹದ ಕಿವಿಯ ಬಳಿ ಗೊಂಯ್‌ಗುಡಲು ಪ್ರಾರಂಭಿಸಿತು. ಸಿಂಹಕ್ಕೆ ಜೀರುಂಡೆಯ ಝೇಂಕಾರ ಕಿರಿಕಿರಿಯಾಯಿತು. ಸಿಂಹ ಕೋಪದಿಂದ ಜೀರುಂಡೆಯನ್ನು ಹಿಡಿಯಲು ತನ್ನ ಕಾಲನ್ನು ಎತ್ತಿತು. ಆದರೆ ಜೀರುಂಡೆ ಸಿಂಹದ ಹೊಡೆತಕ್ಕೆ ಸಿಗದೆ ಅದರ ಮುಖದ ಮುಂದೆ ಗುಂಯ್‌ಗುಡುತ್ತಲೇ ಇತ್ತು. ಜೀರುಂಡೆಯನ್ನು ಹೊಡೆಯಲು ಹೋಗಿ ಸಿಂಹ ತನ್ನ ಮುಖವನ್ನು ತಾನೇ ಪರಚಿಕೊಂಡು ಗಾಯ ಮಾಡಿಕೊಂಡಿತು. ಗಾಯದಿಂದ ರಕ್ತ ಹರಿದಾಗ ಸಿಂಹ ಮತ್ತಷ್ಟು ಕೋಪಗೊಂಡು 'ಹೇ ಜೀರುಂಡೆ, ನಿನ್ನನ್ನು ಹಿಡಿದು ನುಂಗಿಬಿಡುತ್ತೇನೆ' ಎಂದು ಬಾಯಿ ತೆರೆಯಿತು. ಆಗ ಜೀರುಂಡೆ ಸಿಂಹದ ತಲೆಯ ಮೇಲೆ ಕುಳಿತು ಅದನ್ನು ಜೋರಾಗಿ ಕಚ್ಚಿತು. ಸಿಂಹಕ್ಕೆ ಜೀರುಂಡೆಯನ್ನು ಹಿಡಿಯಲಾಗದೆ, ಅದು ಕಚ್ಚಿದ ನೋವನ್ನು ತಾಳಲಾಗದೆ ಸಂಕಟಪಡಲಾರಂಭಿಸಿತು. ಇದನ್ನು ನೋಡಿ ಕಾಡಿನ ಇತರ ಪ್ರಾಣಿಗಳೆಲ್ಲಾ ನಗಲಾರಂಭಿಸಿದವು.

ಆಗ ಜೀರುಂಡೆ 'ಎಲೆ ಸಿಂಹವೇ, ನೀನು ಮಾತ್ರ ಬಲಶಾಲಿಯೆಂದು ತಿಳಿಯಬೇಡ. ನನ್ನ ಶಕ್ತಿ ಸಾಮರ್ಥ್ಯ ಈಗ ನಿನಗೆ ಅರ್ಥವಾಯಿತಾ?' ಎಂದು ಹಂಗಿಸಿತು. ನೋವು ತಾಳಲಾರದ ಸಿಂಹ ಕೂಡಲೆ 'ಜೀರುಂಡೆ, ನೀನೇ ಬಲಶಾಲಿ ನನ್ನನು ಬಿಡು' ಎಂದು ಅಂಗಲಾಚಿತು.

ಆಗ ಜೀರುಂಡೆ ಸೀದಾ ಆನೆಯ ಬಳಿಗೆ ಹೋಗಿ ಅದರ ಕಿವಿಯ ಬಳಿ ಗೊಂಯ್‌ಗುಡಲು ಪ್ರಾರಂಭಿಸಿತು. ಆನೆ ತನ್ನ ಅಗಲವಾದ ಕಿವಿಯಿಂದ ಜೀರುಂಡೆಯನ್ನು ಹೊಡೆಯಲು ನೋಡಿತು. ಜಾಣ ಜೀರುಂಡೆ ಅದರ ಹೊಡೆತದಿಂದ ತಪ್ಪಿಸಿಕೊಂಡು ತನ್ನ ಝೇಂಕಾರ ಮುಂದುವರಿಸಿತು. ಆಗ ಆನೆ ತನ್ನ ಬಲಿಷ್ಠವಾದ ಸೊಂಡಿಲಿನಿಂದ ಹೊಡೆಯಲು ಪ್ರಾರಂಭಿಸಿತು. ಪ್ರತೀ ಬಾರಿಯ ಹೊಡೆತವನ್ನೂ ಜೀರುಂಡೆ ತಪ್ಪಿಸಿಕೊಡಿದ್ದರಿಂದ ಪೆಟ್ಟೆಲ್ಲಾ ಆನೆಯ ಮೈಗೇ ಬಿದ್ದು ಆನೆಗೆ ತುಂಬಾ ನೋವಾಯಿತು. ಆಗ ಕೋಪಗೊಂಡ ಆನೆ 'ಎಲೆ ಚೋಟುದ್ದ ಜೀರುಂಡೆಯೇ, ನಿನ್ನನು ನನ್ನ ಕಾಲಿನಿಂದ ತುಳಿದು ಅಪ್ಪಚ್ಚಿ ಮಾಡುತ್ತೇನೆ'ಎಂದು ಕಾಲೆತ್ತಿತು. ಆಗ ಜೀರುಂಡೆ ಆನೆಯ ಹಣೆಯ ಮೇಲೆ ಬಲವಾಗಿ ಕಚ್ಚಿತು. ನೋವು ತಾಳಲಾರದೆ ಆನೆ ನರಳುತ್ತಾ 'ಜೀರುಂಡೆ ನೀನೇ ಶಕ್ತಿವಂತ. ನನ್ನನು ಕಚ್ಚುವುದು ಬಿಡು' ಎಂದು ಅಂಗಲಾಚಿತು. ಇದನ್ನು ಕಂಡು ಇತರ ಪ್ರಾಣಿಗಳು ನಗಲಾರಂಭಿಸಿದವು.

ಆಗ ಜೀರುಂಡೆ ಮೇಲೆ ಹಾರಾಡುತ್ತಾ 'ದೊಡ್ಡ ದೇಹವಿದ್ದವರಿಗೆ ಮಾತ್ರ ಶಕ್ತಿ ಇರುವುದೆಂದು ತಿಳಿಯಬೇಡ. ಪ್ರತಿಯೊಂದು ಜೀವಿಗೂ ತನ್ನದೇ ಆದ ವಿಶಿಷ್ಟವಾದ ಶಕ್ತಿಯಿರುತ್ತದೆ. ಎಲ್ಲರ ಶಕ್ತಿಯನ್ನೂ ಗೌರವಿಸಬೇಕು. ಈ ಕಾಡು ನಮ್ಮೆಲ್ಲರಿಗೂ ಸೇರಿದ್ದು. ಇಲ್ಲಿ ಯಾರೂ ಹೆಚ್ಚಲ್ಲ, ಯಾರೂ ಕಡಿಮೆಯಲ್ಲ. ಸಿಂಹ ಮತ್ತು ಆನೆ ನೀವಿಬ್ಬರೂ ನಿಮ್ಮನ್ನು ಹೊಗಳಿಕೊಳ್ಳುವುದನ್ನು ನಿಲ್ಲಿಸಿ ಕಾಡಿನ ಶಾಂತಿಯನ್ನು ಕಾಪಾಡಿ' ಎಂದಿತು.

ಜೀರುಂಡೆಯ ಮಾತಿಗೆ ಎಲ್ಲ ಪ್ರಾಣಿಗಳೂ ತಲೆದೂಗಿದವು. ಕಾಡು ಮತ್ತೆ ಸಂತೋಷದ ಬೀಡಾಯಿತು.

**ಬಿ. ಶೋಭಾ ಅರಸ**